# ಸಾಹಿತ್ಯದಲ್ಲಿ ವಿನಯ



**ಜಿ.ಎಚ್. ನಾಯಕ**

ಯಾವ ಸಮಾಜವೇ ಆಗಲಿ ನೀತಿ, ಧರ್ಮ, ಜೀವನಾದರ್ಶ ಇವುಗಳನ್ನು ಕುರಿತಂತೆ ತನ್ನದೇ ಆದ ಕೆಲವು ಪೂರ್ವಗ್ರಹಿಕೆಗಳನ್ನು ಹೊಂದಿರುತ್ತದೆ. ಈ ಪೂರ್ವಗ್ರಹಿಕೆಗಳನ್ನೇ ಆ ಸಮಾಜದ ಜೀವನಮೌಲ್ಯಗಳು ಎಂದು ಕರೆಯಲಾಗುತ್ತದೆ. ಆ ಮೌಲ್ಯಗಳು ಆ ಸಮಾಜದಲ್ಲಿ ಬಾಳಿ ಬದುಕುತ್ತಿರುವವರ ನಡೆನುಡಿಗಳಲ್ಲಿ ಆದರ್ಶಪ್ರಾಯವೆಂಬಂತೆ ಪ್ರಕಟವಾಗುವ ಬಗೆಯನ್ನು 'ವಿನಯ' ಎಂದು ತಿಳಿಯಲಾಗುತ್ತದೆ. ಸಮಾಜದಲ್ಲಿ ಬದುಕುತ್ತಿರುವ ಎಲ್ಲರ ನಡೆನುಡಿಗಳಲ್ಲಿಯೂ ಈ ವಿನಯ ಆದರ್ಶಪ್ರಾಯವಾಗಿಯೇ ಪ್ರಕಾಟವಾಗಬೇಕು ಎಂಬುದು ಸಮಾಜದ ಸಹಜ ಅಪೇಕ್ಷೆಯಾಗಿರುತ್ತದೆ. ಆದರ್ಶವಾಗಿರುತ್ತದೆ. ಆದರೂ ಸಮಾಜದಲ್ಲಿ ಬದುಕುತ್ತಿರುವ ಬಹುಸಂಖ್ಯಾತರ ಬದುಕಿನ ದಿನನಿತ್ಯದ ವ್ಯವಹಾರಗಳಲ್ಲಿ ಆ ವಿನಯದ ಆದರ್ಶವನ್ನು ಠಾಕುಠೀಕಾಗಿ ಪರಿಪಾಲಿಸುವುದು ಸುಲಭವಾಗುವುದಿಲ್ಲ. ಆದ್ದರಿಂದ ಆ ಸಮಾಜದ ಬಹುಸಂಖ್ಯಾತರಿಗೆ ಈ ವಿನಯದ ಆದರ್ಶ ಯಾವಾಗಲೂ ಸಾಧಿಸಬೇಕಾದ ಗುರಿಯಾಗಿರುತ್ತದೆಯೇ ಹೊರತು ಸಾಧಿಸಲ್ಪಟ್ಟ ಸಂಗತಿಯಾಗಿರುವುದಂತೂ ಸಾಧ್ಯವಿಲ್ಲ.

ಮನುಷ್ಯಸಾಮಾನ್ಯರ ನಡೆನುಡಿಗಳ ಈ ಮಿತಿಯನ್ನು ಸಮಾಜದ ದಿನನಿತ್ಯದ ವ್ಯವಹಾರಗಳಿಂದ ಕಂಡುಕೊಂಡಿರುವುದರಿಂದ ಸಮಾಜವು ಈ ವಿನಯಕ್ಕೆ ಸಂಬಂಧಿಸಿದಂತೆ ಸ್ವಲ್ಪ ಮಟ್ಟಿನ ರಿಯಾಯಿತಿಯನ್ನು ಅವರಿಗೆ ತೋರಿಸುತ್ತದೆ. ಸಮಾಜ ಎಂದರೆ ಬೇರೇನೂ ಆಗಿರದೆ ಆಯಾ ಸಮಾಜದಲ್ಲಿ ಬಾಳಿ ಬದುಕುವ ಜನರೇ ಆಗಿರುವುದರಿಂದ ಆ ಜನರು ಪರಸ್ಪರ ಇಷ್ಟುಮಟ್ಟಿನ ರಿಯಾಯಿತಿಗಳನ್ನು ಕೊಟ್ಟುಕೊಂಡು ಬಾಳು ಸಾಗಿಸುತ್ತಿರುತ್ತಾರೆ. ಆ ರಿಯಾಯಿತಿಗಳಿಗೂ ಒಂದು ಮಿತಿ ಇದೆ. ಆ ಮಿತಿಯ ಎಲ್ಲೆ ಕಟ್ಟನ್ನೂ ಮೀರಿ ನಡೆಯುವವರನ್ನು ಸಮಾಜ ಸಹಿಸುವುದಿಲ್ಲ. ಏಕೆಂದರೆ ಅಂಥವರ 'ಅವಿನಯ'ದಿಂದಾಗಿ ಸಮಾಜದ ಮೌಲ್ಯ ವ್ಯವಸ್ಥೆಗೆ ಜಖಂ ಆಗುವ ಸಂಭವವಿರುತ್ತದೆ.

ಸಮಾಜ ಜೀವನದ ಭದ್ರತೆಗೆ, ಕ್ಷೇಮಕ್ಕೆ ಅದು ಸವಾಲಾಗುವಂತಿರುತ್ತದೆ. ಹಾಗೆ ಸಮಾಜದ ವಿನಯದ ಕಟ್ಟು ಪಾಡುಗಳನ್ನು ಮೀರುವವರಲ್ಲಿ ಪರಮದುಷ್ಟರೂ ಇರಬಹುದು, ಸಾಕ್ರಟೀಸನಂಥ ಹಿರಿಯ